ಅಧ್ಯಕ್ಷರು: ಅದನ್ನು ಸೋಮವಾರ ತೆಗೆದುಕೊಳ್ಳುತ್ತೇನೆ. ಈಗಾಗಲೇ ೧೨½ ಗಂಟೆಯಾಗಿದೆ. ಈಗ ನಿಮ್ಮ ನಿಲುವಳಿ ಸೂಚನೆಯನ್ನು ಏನು ಮಾಡಬೇಕು ಅಂತ ಅನ್ನುವುದು ಇದೆ. ಅನುಮತಿ ಕೊಡುವುದು ನನಗೆ ಸಂಬಂಧಪಟ್ಟದ್ದು. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ಈಗಾಗಲೇ ಬಹಳ ವೇಳೆಯಾಗಿರುವುದರಿಂದ ಅದನ್ನು ಸೋಮವಾರ ತೆಗೆದುಕೊಳ್ಳುತ್ತೇನೆ. ಮತ್ತು ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

Attack on the House of the Leader of opposition (Sri A. K. Subbaiah) in the Legislative Council.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸಿಪುರ).—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರ ಮನೆಯ ಮೇಲೆ ನಡೆದಿರತಕ್ಕಂಥಾ ಹಲ್ಲೆ ಪ್ರಕರಣ ಬಗ್ಗೆ ಕೆಲವು ವಿವರಣೆಗಳನ್ನು ಈ ಸದನದ ಮುಂದೆ ಕೊಟ್ಟರು. ಈ ಮೆರವಣಿಗೆಯನ್ನು ತೆಗೆದುಕೊಂಡು ಹೋದಂಥಾ ಜನ ಏನು ಇದ್ದಾರೆ ಅವರು ಸುಬ್ಬಯ್ಯನವರ ಮೇಲೆ ಧಿಕ್ಕಾರ ಹಾಕಿ ಕೊಂಡು ಘೋಷಣೆಗಳನ್ನು ಕೂಗಿಕೊಂಡು ಹೋದರು. ಅನ್ನುವ ಮಾತನ್ನು ಹೇಳಿದರು. ಅಂತ್ತು ಮನೆಯ ಮುಂದೆ ಅವರುಗಳು ಹೋದಾಗ ಸುಬ್ಬಯ್ಯನವರು ಇಲ್ಲ ಅನ್ನುವ ಮಾತನ್ನು ಸಹ ಹೇಳಿದ್ದಾರೆ. ಮತ್ತು ಇನ್ನೇನು ಹೇಳಿದರು ಎಂದರೆ ಇಬ್ಬರು ಮೆಮೋರ್ಯಾಂಡಂ ಕೊಡುವುದಕ್ಕೆ ಹೋದರು ಅನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ನಾನು ವಿಚಾರ ಮಾಡಿದ್ದೇನೆ, ಅವರು ಯಾವ ಮೆಮೋರ್ಯಾಂಡಂ ಸಹಾ ಕೊಟ್ಟಿಲ್ಲ. ನಿನ್ನೆ ದಿವಸ ಈ ಬಗ್ಗೆ ಮುಖ್ಯಮಂತ್ರಿಗಳು ಹೇಳಿದಾಗ ನನಗೆ ಗೊತ್ತಿದ್ದರೂ ಸಹ ಆ ಬಗ್ಗೆ ಒಂದು ಚಕಾರ ಶಬ್ದವೂ ಎತ್ತಲಿಲ್ಲ. ನಿನ್ನೆ ದಿವಸ ಈ ಮೆರವಣಿಗೆಯನ್ನು ತೆಗೆದುಕೊಂಡು ಹೋದಂಥಾ ಜನ ವಿರೋಧ ಪಕ್ಷದ ನಾಯಕರ ಮನೆಗೆ ಹೋದರೆ ಮನೆಯಲಿ ಇದ್ದವರು ಅವರ ಭಾವಮೈದ ಮತ್ತು ಒಬ್ಬ ಆಳು ಅವರ ಪತ್ನಿ ಶಾಖೆಗೆ ಹೋಗಿದ್ದರು ಇನ್ನಾರೂ ಕೂಡ ಮನೆಯಲ್ಲಿರಲಿಲ್ಲಾ. ಆ ಮೆರವಣಿಗೆಯನ್ನು ತೆಗೆದುಕೊಂಡು ಹೋದಂಥಾ ಜನರು ಆ ಆಳಿನ ಮೇಲೆ ಮತ್ತು ಅವರ ಮನೆಯವರ ಮೇಲೆಲ್ಲಾ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದ್ದಾರೆ, ಅವರು ಯಾವ ಮೆಮೋರ್ಯಾಂಡೂ ಕೂಡ ಕೊಟ್ಟಿಲ್ಲಾ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಎಂದರೆ ಪೋಲೀಸಿನವರು ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ನಿಷ್ಕ್ರಿಯತೆಯನ್ನು ಹೊಂದಿದ್ದಾರೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಆಪಾದನೆ ಮಾಡುತ್ತೇನೆ. ಇದೆಲ್ಲಾ ಆದಮೇಲೆ ಸರ್ಕಲ್ ಇನ್‌ಸ್ಪೆಕ್ಟರ್ ಹೋಗಿದ್ದಾರೆ, ಅವರು ಇವರು ಹೋಗಿದ್ದಾರೆ.

ಇದರ ಬಗ್ಗೆ ಇನ್ನೊಂದು ಆರೋಪ ಏನೆಂದರೆ ಇವರ ಮನೆಯ ಪಕ್ಕದಲ್ಲೆ ಪೌರಾಡಳಿತ ಸಚಿವರ ಮನೆ ಇರುವುದರಿಂದ ಅವರ ಮನೆಯಲ್ಲಿ ಶ್ರೀಮಾನ್ ಶಿವಣ್ಣನವರು ಮತ್ತು ಶ್ರೀಮಾನ್ ಐ.ಪಿ.ಡಿ. ಸಾಲಪ್ಪನವರು ಆ ಸಂದರ್ಭದಲ್ಲಿ ಇದ್ದರು ಅನ್ನುವುದೂ ಒಂದು. ಇದು ಗಂಬೀರವಾದ ಪ್ರಶ್ನೆ ಏಕೆಂದರೆ ಈಪೊತ್ತು ಮಾನ್ಯ ಸುಬ್ಬಯ್ಯನವರ ಮನೆಗೆ ನುಗ್ಗಿದ ಈ ಜನ ಪತ್ರಿಕೆಗಳಲ್ಲಿ ಬರೆಯತಕಂಥಾ ಜನ ಇದನ್ನು ಓದಿಲ್ಲ ಎಂದು ಹೇಳತಕ್ಕಂಥಾ ಜನ ಏನೇನು ಅವಾಚ್ಯಶಬ್ದಗಳನ್ನು ಇವರ ಮೇಲೆ ಉಪಯೋಗಿಸಿದ್ದಾರೆ ಅದನ್ನು ಹೇಳಬೇಕಾದರೆ ಏನು ಹೇಳಿದ್ದಾರೆ ಎಂದರೆ ಇವರು ಕದ್ದು ಮನೆಯಲ್ಲಿ ಕೂತಿದ್ದಾರೆ ಎಂದು ಹೇಳಿದ್ದಾರೆ, ಅಷ್ಟೇ ಅಲ್ಲ ಇವರಿಗೆ ಧಿಕ್ಕಾರ ಎಂದು ಹಾಕಿದ್ದಾರೆ ಇನ್ನೂ ಮುಂತಾದ ಘೋಷಣೆಗಳನ್ನು ಕೂಗಿಕೊಂಡು ಹೋಗಿದ್ದಾರೆ. ಈಪೊತ್ತಿನ ದಿವಸ ಇವರಿಗೆ ಹೀಗಾದ ಮೇಲೆ ನಾಳೆ ದಿವಸ ಜನತಾ ಪಾರ್ಟಿ ಅಧ್ಯಕ್ಷರಾದ ನನ್ನ ಮನೆ ಮೇಲೆ ಆಗಲಿ ಅಥವಾ ಈ ಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಎಸ್. ಆರ್ ಬೊಮ್ಮೈನವರ ಮನೆ ಮೇಲಾಗಲಿ ಇಂಥಾ ಜನ ಬಂದು ನಾವು ಅವರಿಗೆ ಒಂದು ಮೆಮೋರ್ಯಾಂಡಂ ಕೊಡಬೇಕು ಅಂತ ಬಂದು ಒಳಗಡೆ ನಾಲ್ಕು ಬಿಟ್ಟರೆ ಪರಿಸ್ಥಿತಿ ಏನಾದೀತು ಹೇಳಿ. ಇವರಂ ಮೆಮೊರ್ಯಾಂಡಂ ಕೊಡುವುದಕ್ಕೆ ಹೋದರು ಅಂತ ಹೇಳಿದರಲ್ಲಾ ಆ ಮೆಮೋರ್ಯಾಂಡಂ ಕಾಪಿ ಏನಾದರೂ ಇಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆಯೇ ? ಇದರ ಬಗ್ಗೆ ತಾವು ತೀವ್ರವಾಗಿ ಆಲೋಚಿಸಬೇಕು. ಈ ಅಧಿಕಾರಿಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವರದಿಯನ್ನು ತರಿಸಿಕೊಳ್ಳುವುದಾದರೆ ಅಥವಾ ಇಲ್ಲಿ ಏನು ಹೇಳಿಕೆಯನ್ನು ಇಟ್ಟಿದ್ದಾರೆ ಅದು ತಮ್ಮ ಮೂಗಿನ ನೇರಕ್ಕೆ ಅಂಥಾ ವರದಿಯನ್ನು ಇಡುವುದಾದರೆ ಇಂಥಾ ಪ್ರಕರಣಗಳು ಮುಂದೆ

ಯಾವುದಕ್ಕೆ ತಿರಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ನಾನು ಕೇಳಿದ್ದೇನೆ. ನಾನು ಚೆನ್ನಾಗಿ ವಿಚಾರ ಮಾಡಿ ಕೇಳಿದ್ದೇನೆ ಆ ಜನ ಯಾಪ ಮೆಮೋರ್ಯಾಂಡಂ ಕೂಡಾ ಕೊಟ್ಟಿಲ್ಲಾ. ಇದು ಸುಸ್ಪಷ್ಟ ನಂತರ ಆ ಸ್ಥಳದಲ್ಲಿದ್ದ ಅಧಿಕಾರಿಗಳ ವರ್ತನೆ ಏನು ಇದೆ ಮತ್ತು ಯಾರು ಇವರನ್ನು ಕಳುಹಿಸಿದ್ದಾರೆ ಅದನ್ನೂ ಕೂಡ ವಿಚಾರ ಮಾಡಿದ್ದೇನೆ. ಈ ಒಂದು ವರದಿಯನ್ನು ಸೃಷ್ಟಿಸಿ ಮಾಡಿ ಕಳುಹಿಸಿದ್ದಾರೆ, ಆದುದರಿಂದ ಈ ವರದಿಯನ್ನು ಯಾರು ಕಳುಹಿಸಿದ್ದಾರೆ ಅಂಥಾ ಅಧಿಕಾರಿಗಳ ಮೇಲೆ ಕಾರ್ಯಕೆಮು ತೆಗೆದುಕೊಳ್ಳಬೇಕು ಎಂದು ನನ್ನ ಸ್ಪಷ್ಟವಾದ ಒತ್ತಾಯ ಇದೆ. ಅದನ್ನು ಮಾಡದೆ ಹೋದರೆ ಮುಂದೆ ಇಂತಹ ಪ್ರಕರಣಗಳು ನಾಳ್ಕಾರು ನಡೆಯುತ್ತವೆ, ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲಾ? ಮೆಮೋರ್ಯಾಂಡಾಂ ಕೊಡಬೇಕು. ಅನ್ನುವ ನೆಪದಲ್ಲಿ ಇಂತಹ ಪ್ರಕರಣಗಳನ್ನು ನಿಮ್ಮ ಅಧಿಕಾರಿಗಳಿಂದಲೇ ಮಾಡಿಸುವುದಕ್ಕೆ ಇನ್ನು ಮುಂದಕ್ಕಾದರೂ ಅವಕಾಶ ಕೊಡಬೇಡಿ. ಯಾವ ಅಧಿಕಾರಿಯೇ ಇರಲಿ ಅವನು ತನ್ನ ಕರ್ತವ್ಯದಲ್ಲಿ ಲೋಪ ಮಾಡಿದರೆ ತಕ್ಷಣ ಅವರನ್ನು ಸಸ್ಪೆಂಡ್ ಮಾಡಬೇಕು. ನಂತರ ಡಿಪಾರ್ಟ್‌ಮೆಂಟಲ್ ಆಕ್ಷನ್ ತೆಗೆದುಕೊಳ್ಳಬೇಕು. ಈ ವರದಿಯಲ್ಲಿ ನೋಡಿದಾಗ ಅದು ಯಾವುದೂ ಇಲ್ಲ. ಈ ರೀತಿಯಾಗಿ ಮುಖಲಾಜು ತೋರಿಸುವುದು ಏತಕ್ಕೆ, ಅವನಿಗೆ ಏತಕ್ಕೆ ರಿಯಾಯಿತಿ ತೋರಿಸಿದ್ದೀರಿ? ಯಾವ ಅಧಿಕಾರಿಯೇ ಆಗಲಿ ಅವನು ತನ್ನ ಕರ್ತವ್ಯದಲ್ಲಿ ಲೋಪ ಮಾಡಿದ್ದರೆ ಮೊದಲು ಸಸ್ಪೆನ್‌ಷನ್ ಮಾಡುತ್ತಾರೆ, ಈ ಸಸ್ಪೆನ್‌ಷನ್ ಅಂತ ಮಾಡತಕ್ಕದ್ದು ಆಪಲಿತದಲ್ಲಿ ಅವನ ದೋಷ ಏನಾದರೂ ಆಪಲಿತದಲ್ಲಿ ಇದ್ದರೆ ಅದನ್ನು ನಿವಾರಣೆ ಮಾಡತಕ್ಕಂಥಾ ಷಾರ್ಟ್‌ಟರ್ಮ್ ಟ್ರೀಟ್‌ಮೆಂಟ್ ಇದ್ದ ಹಾಗೇ. ಇದೇನು ಪರ್ಮನೆಂಟು ಅಲ್ಲಾ. ಅವರನ್ನು ಟೆಂಪರರಿಯಾಗಿ ಸ್ವಲ್ಪ ದಿವಸ ಅಂದರೆ ಆ ದೋಶ ನಿವಾರಣೆಯಾಗುವವರೆಗೆ ಇಡುತ್ತಾರೆ. ನಾನು ಇದರ ಬಗ್ಗೆ ಒತ್ತಾಯ ಮಾಡುವುದಿಲ್ಲ. ಇದು ನಿಮಗೆ ಬಿಟ್ಟ ವಿಷಯ. ಆದರೆ ಈ ಗಲಾಟೆ ನಡೆದಾಗ ಮಾನ್ಯ ಶಿವಣ್ಣನವರೂ ಕೂಡ ಪಕ್ಕದ ಮನೆಯಲ್ಲಿ ಇದ್ದರು ಅನ್ನುವ ಮಾತನ್ನು ಹೇಳುತ್ತೇನೆ.

೧೨ ಮಧ್ಯಾಹ್ನ

ಮಾನ್ಯ ಶಿವಣ್ಣನವರೂ ಪಕ್ಕದಲ್ಲಿಯೇ ಇದ್ದರು. ಅದನ್ನು ನಾನು ವಿಚಿತ ಮಾಡಿಕೊಂಡಿದ್ದೇನೆ. ಇಂಡಿಯನ್ ಎಕ್ಸ್‌ಪ್ರೆಸ್ ಆಫೀಸಿಗೆ ಹೋದಂತ ಕಾಲದಲ್ಲಿ ಇವರು ರಿಪೋರ್ಟ್‌ನ್ನು ಕೊಡಲಿಕ್ಕೆ ಹೋಗಿದ್ದರು. ಸುಮಾರು ೧೪-೧೫ ಜನ ರಿಪೋರ್ಟ್ ಕೊಡಲಿಕ್ಕೆ ಹೋದರೆ, ಮೂರು ಗಂಟೆಗೆ ಆಫೀಸ್ ಮುಂದೆ ಮಾನ್ಯ ಶಿವಣ್ಣನವರು ಹಾಜರಿದ್ದರು. ಆದ್ದರಿಂದ ನಾನು ಹೇಳುವುದು, ತಾವು ಇಂಥ ವಿಷಯಗಳ ಬಗ್ಗೆ ಯಾವ ದಯೆ ದಾಕ್ಷಿಣ್ಯ ಇಲ್ಲದೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ನಾವುಗಳು ರಾಜಕೀಯ ಪಕ್ಷದ ಮುಖಂಡರುಗಳಾಗಿ ಕೆಲಸಮಾಡತಕ್ಕದ್ದು ಕಷ್ಟವಾಗುತ್ತದೆ. ದಯ ಮಾಡಿ ತಾವು ಯಾರನ್ನೂ ಇದರಲ್ಲಿ ಸೇರ್ ಮಾಡಬಾರದು ಎಂದು ನಾನು ಒತ್ತಾಯ ಮಾಡಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ — ನಾನು ನಿನ್ನೆಯ ದಿವಸ ಸದನದಲ್ಲಿರಲಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಈ ವಿಚಾರವಾಗಿ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದ ಭಾವನೆಗಳನ್ನು ಅರ್ಥಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಇದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ತೆಗೆದುಗೂಳ್ಳುವ ಬಗ್ಗೆ ಆಶ್ವಾಸನೆಯನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಮಾನ್ಯ ದೆ ಗೌಡರು ಹೇಳಿದಂತೆ, ನಿನ್ನೆಯದಿವಸ ಮಾನ್ಯ ಸುಬ್ಬಯ್ಯನವರ ಮನೆಗೆ ಮೆರವಣಿಗೆ ಹೋಗುವವರೆಗೆ, ಸುಬ್ಬಯ್ಯನವರಿಗೆ ಧಿಕ್ಕಾರ ಎಂದು ಮೆರವಣಿಗೆಯಲ್ಲಿ ಕೂಗಿದ್ದರೂ ಅಧಿಕಾರಿಗಳು ಯಾವ ಕ್ರಮವನ್ನು ತೆಗದುಕೊಂಡಿಲ್ಲ. ಮನೆಯಲ್ಲಿ ಸುಬ್ಬಯ್ಯನವರು ಇಲ್ಲವೆಂದು ಹೇಳಿದರೂ, ಅವರ ಪ್ರೈವೇಟ್ ಸೆಕ್ರೆಟರಿ ಇಲ್ಲವೆಂದು ತಿಳಿಸಿದರೂ ಮನೆಗೆ ನುಗ್ಗುತಕ್ಕ ಅವಶ್ಯಕತೆ ಏನು ಇತ್ತು? ಇವರನ್ನು ಪೋಲೀಸರು ಏಕೆ ತಡೆಯಲಿಲ್ಲ? ತಮಗೆ ಗೊತ್ತಿದೆ ಯಾರಾದರೂ ಮೆರವಣಿಗೆಯಲ್ಲಿ ಮುಖ್ಯಮಂತ್ರಿಗಳ ಮನೆಗೆ ಹೋದಾಗ, ಅವರು ಮನೆಯಲ್ಲಿದ್ದರೆ ಒಳಗೆ ಬಿಡುತ್ತಾರೆ, ಇಲ್ಲದೇ ಹೋದರೆ, ಜನರನ್ನು ತಡೆದು ಹೊರಗಡೆ ಕಳುಹಿಸುತ್ತಾರೆ, ಇಂಥಾದ್ದು ಅನೇಕಸಲ ನಡೆಯುತ್ತಿರುತ್ತದೆ. ಈ ಜನಗಳು ವಿರೋಧ ಪಕ್ಷದ ನಾಯಕರಿಗೆ ಮೆಮೋರ್ಯಾಂಡಂ ಕೊಡತಕ್ಕ ವ್ಯವಸ್ಥೆ ಇದ್ದರೆ ಅದು ಸರಿ. ಆದರೆ ಸಬ್ ಇನ್ಸ್‌ಪೆಕ್ಟರ್, ಅವರು ಒಳಗೆ ಇಲ್ಲ ಎಂದು ಹೇಳಿದ ಮೇಲೂ, ಒಳಗೆ ಇದ್ದಾರೆ, ಬಚ್ಚಿಕೊಂಡಿದ್ದಾರೆ ಎಂದು ಕೂಗಿದ್ದಾರೆ. ಇವರನು ಅರೆಸ್ಟ

ಮಾಡತಕ್ಕ ಕೆಲಸವನ್ನು ಪೋಲೀಸ್ ಅಧಿಕಾರಿಗಳು ಏಕೆ ಮಾಡಲಿಲ್ಲ? ಒತ್ತಾಯದಿಂದ ಮನೆಗೆ ನುಗ್ಗ ತಕ್ಕ ವ್ಯವಸ್ಥೆ ಇದ್ದಾಗ ಪೋಲೀಸ್ ಅಧಿಕಾರಿಗಳು ಏಕೆ ತಡೆಯಲಿಲ್ಲ? ಪೋಲೀಸ್ ವ್ಯಾನ್ ಇದ್ದು ಅಧಿಕಾರಿಗಳು ಇದ್ದು, ಅಷ್ಟು ಜೋರಾಗಿ ಒತ್ತಾಯದಿಂದ ಕೂಗಿದರೂ ಇವರನ್ನು ಏಕೆ ಅಧಿಕಾರಿಗಳ ತಡೆಯಲಿಲ್ಲ? ಮಾನ್ಯ ದೇವೇಗೌಡರು ಹೇಳಿದ ಹಾಗೆ, ಇವರುಗಳು ಮುನಿಸಿಪಲ್ ಅಡ್ಮಿನಿಸ್ಟ್ರೇಷನು ಮಂತ್ರಿಗಳ ಮನೆಗೆ ಹೋಗಿ ತಾವು ಮಾಡಿದ ಎಲ್ಲಾ ಕೃತ್ಯಗಳನ್ನು ತಿಳಿಸಿ ನೀರು ಕುಡಿದು ಹೋಗಿ ದ್ದಾರೆ. ನಂತರ ಶ್ರೀಮಾನ್ ಶಿವಣ್ಣನವರು ಇವರುಗಳನ್ನು ಹೋಟೆಲ್‌ಗೆ ಕರೆದುಕೊಂಡು ಹೋಗಿ ಊಟ ಮಾಡಿಸಿ ಕಳುಹಿಸಿದ್ದಾರೆ. ಇದನ್ನೆಲ್ಲಾ ನಾವು ನೋಡಿದಾಗ, ಪೋಲೀಸರಿಂದ ಈ ಜನಗಳನ್ನು ಅರೆಸ್ಟ್ ಮಾಡತಕ್ಕ ಕೆಲಸ ನಡೆಯಲಿಲ್ಲ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇವತ್ತು ನಾನು ಮಾನ್ಯ ಸುಬ್ಬಯ್ಯನವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರಿಗೆ ರಕ್ಷಣೆ ಕೊಡಲು ಅಲ್ಲಿ ಒಬ್ಬ ಪೋಲೀಸರೂ ಇಲ್ಲ. ಇಂಥ ಸಮಯದಲ್ಲಿ ಅವರಿಗೆ ಸರ್ಕಾರದವರು ರಕ್ಷಣೆ ಕೊಡಬೇಕೆ ಬೇಡವೆ? ಪತ್ರಿಕೆಯಲ್ಲಿ ನಿನ್ನೆ ನಡೆದಿದ್ದು ಎಲ್ಲಾ ಬಂದಿದೆ. ಆದರೂ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ಸಹ ರಕ್ಷಣೆಗೆ ಇಲ್ಲ. ನಮಗಾಗಲೀ ಮಾನ್ಯ ಸುಬ್ಬಯ್ಯನವರಿಗಾಗಲೀ ಅಂಜಿಕೆಯಿಂದ ರಕ್ಷಣೆ ಕೊಡಿ ಎಂದು ಕೇಳುತ್ತಿಲ್ಲ. ನಾವು ರಾಜಕೀಯದಲ್ಲಿ ಅಂಜಿಕೊಳ್ಳುವ ಕಾರಣವೇ ಇಲ್ಲ. ನೈತಿಕವಾಗಿ ನಮಗೆ ತಿಳಿದ ವಿಚಾರಗಳನ್ನು ಸಭೆಯಲ್ಲಿ ಹೇಳುವುದಕ್ಕೆ ಆಗಲೀ, ಅಥವಾ ಹೊರಗಡೆ ಹೇಳುವುದಕ್ಕಾಗಲೀ ಈ ಗೂಂಡಾ ಗಿರಿಗೆ ಅಂಜಿ ಹಿಂಜರಿಯುವುದಿಲ್ಲ. ಆದರೆ ಸರ್ಕಾರದಲ್ಲಿ ಇಂಥ ಕರ್ತವ್ಯ ಮಾಡುವುದಕ್ಕೆ ರಕ್ಷಣೆ ಕೊಡುವಂಥ ವ್ಯವಸ್ಥೆಯಿಲ್ಲ ಎಂದರೆ ಹೇಗೆ? ನಾವು ಧರಣಿ ಮಾಡಿದಾಗ ನಮ್ಮ ಸಭಾಧ್ಯಕ್ಷರ ಮನೆಯ ಮುಂದೆ ಪೋಲೀಸ್ ವ್ಯಾನ್ ಒಂದು ತಿಂಗಳವರೆಗೆ ಇರುವುದನ್ನು ನಾವು ನೋಡಿದ್ದೇವೆ. ಏಕೆಂದರೆ, ಅವರ ಮನೆಯ ಮುಂದೆ, ಅವರಿಗಾಗಲೀ ಅಥವಾ ಮನೆಯವರಿಗಾಗಲೀ ಅನೂಚಾನವಾದ ಘಟನೆ ನಡೆಯಬಾರದು ಎನ್ನುವ ಉದ್ದೇಶದಿಂದ ಈ ರೀತಿ ವ್ಯಾನನ್ನು ಇಡಲಾಗಿತ್ತು. ಆದೇ ವಿರೋಧ ಪಕ್ಷದ ನಾಯಕರ ಮನೆಯ ಮುಂದೆ, ಮನೆಯ ಮೇಲೆ ಹಲ್ಲೆ ಮಾಡಿದ ಮೇಲೂ ರಕ್ಷಣೆ ಕೊಡತಕ್ಕ ವ್ಯವಸ್ಥೆಯಿಲ್ಲ. ಆ ಮೆರವಣಿಗೆಯಲ್ಲಿದ್ದವರು ಬನತಂಕರಿಯ ಸ್ಲಂ ಜನ ಅಲ್ಲ. ಹೆಚ್ಚಾಗಿ ಬೇರೆ ಬೇರೆ ಕಡೆಯಿಂದ ಶ್ರೀಮಾನ್ ಶಿವಣ್ಣನವರ ಹಿಂಬಾಲಕರು ಬಂದಿದ್ದರು ಎಂದು ಖಚಿತವಾಗಿ ನಮಗೆ ತಿಳಿದು ಬಂದಿದೆ. ಇದರ ಹಿನ್ನಲೆಯಲ್ಲಿ ನಾವು ಈ ವಿಚಾರವನ್ನು ನೋಡಬೇಕಾಗಿದೆ. ಇದರ ಹಿಂದೆ ಯಾರ ಕೈವಾಡ ಇದೆ ಅವರ ಮೇಲೂ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅವರು ಕಾಂಗ್ರೆಸ್(ಐ) ಪಕ್ಷಕ್ಕೆ ಸೇರಿರಲೀ, ಜನತಾ ಪಕ್ಷಕ್ಕೆ ಸೇರಿರಲಿ, ಯಾವುದೇ ಪಕ್ಷಕ್ಕೆ ಸೇರಿರಲೀ ಮತ್ತು ಪಕ್ಷಗಳಿಗೆ ಸಂಬಂಧಪಡದೆ ಇರಲಿ, ಅವರ ಮೇಲೆ ದಯೆ ದಾಕ್ಷಿಣ್ಯ ಇಲ್ಲದೆ ತಾವು ಕ್ರಮ ತೆಗೆದುಕೊಳ್ಳಬೇಕು

ಶ್ರೀ ಮೈಕಲ್ ಬಿ. ಫರ್ನಾಂಡೀಸ್:—ಪುಡಾರಿಗಳ ಮೇಲೂ ತಾವು ಕ್ರಮ ತೆಗೆದುಕೊಳ್ಳತ್ತಕ್ಕ ವ್ಯವಸ್ಥೆಯನ್ನು ಮಾಡಬೇಕು, ಮಾಡುತ್ತೀರೆಂದು ನಂಬಿದ್ದೇವೆ. ಅಧಿಕಾರಿಗಳ ಮೇಲೆ ಕಾನೂನಿಂ ಭದ್ದವಾದ ಕ್ರಮವನ್ನು ಕೈಗೊಳ್ಳಲಿಕ್ಕೆ ಸೂಚನೆ ಕೊಡುತ್ತೀರಾ? ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ನಗರದಲ್ಲಿ ಒಂದು ನಮೂನೆಯ ಗ್ಯಾಂಗ್‌ಗೆ ಅನುಮತಿಯನ್ನು ಕೊಟ್ಟಿದ್ದಾರೆ. ಇತ್ತೀಚಿನ ಘಟನೆಗಳಲ್ಲಿ ನಾವು ನೋಡುವುದಾದರೆ, ಮತ್ತು ನಡೆದಂಥ ಘಟನೆಗಳನ್ನು ನಾವು ವಿಚಾರ ಮಾಡುವು ದಾದರೆ, ಇವರು ಒಂದು ನಮೂನೆಯ ಗ್ಯಾಂಗನ್ನು ಮಾಡಿ, ರಾಜಕೀಯದಲ್ಲಿ ಯಾರೂ ಕೆಲಸ ಮಾಡ ಬಾರದು ಎನ್ನುವ ಹಾಗೆ ಮಾಡಿದ್ದಾರೆ.

ಅಧ್ಯಕ್ಷರು:—ಮಾನ್ಯ ಸದಸ್ಯರುಗಳು ಸಾಕಷ್ಟು ಈ ವಿಷಯವಾಗಿ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಸ್ವಾಮಿ ನಮ್ಮ ಸ್ನೇಹಿತರು ಏಕೆ ಕೋಪ ಮಾಡಿಕೊಳ್ಳುತ್ತಾರೋ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್:—ನಾನು ಐದನೆಯ ತಾರೀಖು ಒಂದು ದೂರನ್ನು ಬರೆದು ಕಳುಹಿಸಿಕೊಟ್ಟಿದ್ದೇನೆ ಅದಕ್ಕೆ ಉತ್ತರ ಬರೆಯುವಷ್ಟು ಸೌಜನ್ಯತೆಯೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್ :—ತಾವು ಏನು ಬರೆದಿದ್ದೀರಿ, ಬರದಿರುವುದು ಸರಿಯೇ ತಪ್ಪೇ ಎಂದು ನೋಡಬೇಕು. ನೀವು ನಿಮ್ಮ ಇಚ್ಛೆ ಬಂದ ಹಾಗೆ ಬರೆದರೆ ನಾನೇನು ಮಾಡಲಿ.?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್:—ಸ್ವಲ್ಪವೂ ಸಭ್ಯತೆಯನ್ನೂ ತೋರಿಸಲಿಲ್ಲ ನೀವು. ಮತ್ತು ಅದು ಸರಿಯೇ ತಪ್ಪೇ ಎಂದು ಕಂಡುಹಿಡಿಯುವ ಕೆಲಸಕ್ಕೆ ಕೈ ಹಾಕಲಿಲ್ಲ.

ಶ್ರೀ ಡಿ. ದೇವರಾಜ ಅರಸ್:—ಕಂಡುಹಿಡಿಯುವ ಸಭ್ಯತೆ ಇರಲಿ, ನೀವು ನಿಜವಾಗಿಯೂ ಬರೆಯುವ ಸಭ್ಯತೆಯನ್ನು ತಿಳಿದುಕೊಳ್ಳಿ. ಈಗ ಬಂದಿರುವ ವಿಚಾರದ ಬಗ್ಗೆ ಮಾನ್ಯ ದೇವೇಗೌಡರು ಹೇಳಿದರು. ಅದರ ಮಧ್ಯದಲ್ಲಿ ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಈ ವಿಷಯದಲ್ಲಿ ಹೇಳುವುದಾದರೆ ಮಾನ್ಯ ಸಂಬ್ಬಯ್ಯನವರನ್ನು ಕಂಡು ಇವರು ಮೆಮೋರ್ಯಾಂಡಂನ್ನು ಕೊಡಲಿಲ್ಲ. ಎಂದು ಪೋಲೀಸ್‌ನವರು ರಿಪೋರ್ಟ್ ಕೊಟ್ಟಿರುವುದು ತಪ್ಪೇ? ಪೋಲೀಸ್ ಕಮಿಷನರ್ ಅವರೇ ಅಲ್ಲಿಗೆ ಹೋದಾಗ ಇವರು ಮೆಮೋರ್ಯಾಂಡಂನ್ನು ತೋರಿಸಿದ್ದಾರೆ, ಅದನ್ನು ಕೊಟ್ಟಿದ್ದಾರೆ. ಇನ್ನು ಯಾರನ್ನು ನಾನು ನಂಬಬೇಕು, ತಾವು ಇದನ್ನು ನಂಬುವುದಿಲ್ಲವೆಂದರೆ ನಾನು ಏನೂ ಹೇಳುವುದಕ್ಕೆ ಬರುವುದಿಲ್ಲ. ನನಗೆ ಮೆಮೋರ್ಯಾಂಡಂ ಕೊಟ್ಟಿಲ್ಲವೇದು ನೀವು ಹೇಳಿರುವುದು ಇದು ಸಬ್ ಇನ್ಸ್‌ಪೆಕ್ಟರ್ ಹೇಳಿರುವ ಪ್ರಶ್ನೆಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪೋಲೀಸ್ ಕಮಿಷನರ್ ಟೇಬಲ್ ಮೇಲೆ ನೋಡಿಕೊಂಡು ಬಂದಿದ್ದಾರೆಯೇ ಈ ರೀತಿಯಾಗಿ ರಿಪೋರ್ಟ್ ಇದೆಯೇ ? ಪೋಲೀಸ್ ಕಮಿಷನರ್ ಅವರು ಸತ್ಯ ಹೇಳಿದ್ದಾರೆ, ನಾನು ಅಸತ್ಯ ಹೇಳಿದ್ದೇನೆಂದು ತಮ್ಮ ಭಾವನೆಯೇ ?

ಶ್ರೀ ಡಿ. ದೇವರಾಜ ಅರಸ್.—ನೀವು ಸತ್ಯ ಹೇಳಿರುವ ಪ್ರಶ್ನೆಯಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ದಯಮಾಡಿ ತಾವು ಏನೂ ಕ್ರಮ ತೆಗೆದುಕೊಳ್ಳಬೇಡಿ, ಆದರೆ ಈ ವಿಷಯದಲ್ಲಿ ನಾನು ಮನಸ್ಸನ್ನು ಸ್ವಲ್ಪ ಬೇಸರ ಮಾಡಿಕೊಂಡು ಹೇಳುತ್ತಿದ್ದೇನೆಂದೂ ತಾವು ಭಾವಿಸಬಾರದು, ನೀವು ಕ್ರಮ ತೆಗೆದುಕೊಳ್ಳದಿದ್ದರೂ ಚಿಂತೆಯಲ್ಲ, ಇಷ್ಟು ಮಾತ್ರ ಹೇಳುತ್ತೇನೆ, ಅಧಿಕಾರಿಗಳನ್ನು ಇಷ್ಟು ದೂರದವರೆಗೆ ನಂಬಲಿಕ್ಕೆ ಹೋಗಬೇಡಿ.

Sri D. DEVARAJ URS.—Just as Mr. Devegowda got the information from Mr. Deviah, I got the information from the Police Commissioner. The Police Commissioner has immediately gone to the House. When he went there this was the thing showed to him. So for as other matter is concerned as Mr. Bommai put it, if protection is needed certainly we will give.

ಶ್ರೀ ಎಚ್. ಡಿ. ದೇವೇಗೌಡ.—ನಾನು ಎ.ಬಿ.ಸಿ.ಡಿ. ಯನ್ನು ಹೇಳಿಕೊಡುವುದಕ್ಕಾಗುವುದಿಲ್ಲ. ಸಭೆಯ ಸದಸ್ಯರುಗಳಿಗೆ ರಕ್ಷಣೆ ಕೊಡತಕ್ಕ ಹೊಣೆಗಾರಿಕೆ ನಿಮ್ಮ ಮೇಲೆ ಇದೆ. ನಮ್ಮನ್ನು ನಂಬುವುದು ಬಿಡುವುದು ನಿಮಗೆ ಬಿಟ್ಟಿದ್ದು. ನಮ್ಮ ಕರ್ತವ್ಯ ಇರುವಾಗ ನಾವು ಹೇಳಲೇಬೇಕಾಗುತ್ತದೆ, ಇದರ ಬಗ್ಗೆ ನಾನು ನಂಬುವುದಿಲ್ಲ ಎಂದರೆ ಹೇಗೆ ? ಚಿಂತೆಯಿಲ್ಲ. Again I must get it verified.

Sri D. DEVARAJ URS.—Then I will have to learn the Administration afresh you are relying on what he is saying ; and I am relying what the Police Commissioner is saying. Even if I can't believe the Police Commissioner Chief Secretary and other officers, I am sorry, I am not prepared to accept that.

He is not a witness. He has also to rely on what somebody else says.

ಶ್ರೀ ಎಚ್. ಡಿ. ದೇವೇಗೌಡ : ಅದನ್ನೇ ನಾನು ಹೇಳುತ್ತಿರುವುದು : ತಾವು ಇಲ್ಲಿ ಇನ್ಸ್‌ಪೆಕ್ಟರ್ ಆಗಲೀ ಅಥವಾ ಕಮೀಷನರ್ ಆಗಲೀ ತಮಗೆ ಹೇಳಿದ್ದನ್ನು ಹೇಳಬೇಕಾಗುತ್ತದೆ. ಅಷ್ಟೇ ನಾನು ಹೇಳಿದ್ದು. ಆದರೆ ತಾವು ಹೇಳಿದ್ದರಲ್ಲಿ ದೋಷವಿರುವ ಕಾರಣ ಮತ್ತೊಮ್ಮೆ ವಿಚಾರ ಮಾಡಿ ಎಂದು ನಾನು ತಮಗೆ ಹೇಳಿದ್ದು. ಆದರೆ ತಾವು ಮತ್ತೊಮ್ಮೆ ವಿಚಾರ ಮಾಡದಿದ್ದರೆ ನನಗೇನೂ ಚಿಂತೆಯಿಲ್ಲ.

ಇನ್ನು ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು ಅಥವಾ ಬಿಡುವುದು ನಿಮಗೇ ಬಿಟ್ಟಿದ್ದು. ಆದರೆ ಇಲ್ಲಿ ಮಧ್ಯಾಹ್ನ ಎರಡೂವರೆ ಗಂಟೆಯ ಹೊತ್ತಿನಲ್ಲಿ ೬ ಜನರನ್ನು ಜುಡಿಷಿಯಲ್ ಕಸ್ಟಡಿಗೆ ತೆಗೆದುಕೊಳ್ಳುವುದಕ್ಕೆ ಬದಲು ಮೊದಲೇ ಪಿಕೆಟ್ಟಿಗೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಾನು ತಮ್ಮನ್ನು ಕೇಳಿದ್ದು :

Sri. D. DEVARAJ URS.—In my statement I have said that the Sub Inspector-whoever it is-, has failed in his duty and action will be taken. What more can I say ?

ಶ್ರೀ ಎಸ್. ಆರ್. ಬೊಮ್ಮಾಯಿ :—ಮಾನ್ಯ ಮುಖ್ಯಮಂತ್ರಿಗಳು ರಕ್ಷಣೆ ಬೇಕಾದರೆ ಕೊಡುತ್ತೇವೆಂದು ಹೇಳಿದರು. ಆದರೆ ನಾವು ರಕ್ಷಣೆ ಬೇಕೆಂದು ತಮ್ಮಲ್ಲಿ ಭಿಕ್ಷೆ ಬೇಡುವುದಿಲ್ಲ. ನಾವು ರಾಜಕೀಯದಲ್ಲಿ ದ್ವೇಷ. ಆದಕಾರಣ ಗೂಂಡಾ ಜನರು ಏನಾದರು ನಮ್ಮ ಹತ್ತಿರ ಬಂದರೆ, ಅವರನ್ನು ಹೆದರಿಸುವುದಕ್ಕೆ ನಮಗೆ ಸಾಮರ್ಥ್ಯವಿದೆ. ಆದರೆ ಇಂತಹ ಘಟನೆಗಳು ನಡೆದ ಮೇಲೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ ಮಂತ್ರಿಗಳು ಇಲ್ಲವೇ ಅಧ್ಯಕ್ಷರ ಮನೆ ಮುಂದೆ ಇಂತಹ ಘಟನೆಗಳು ನಡೆದರೆ ಏನು ಕ್ರಮ ತೆಗೆದುಕೊಳ್ಳುತ್ತೀರೋ ಅಂತಹ ಕ್ರಮವನ್ನು ಈ ಪ್ರಕರಣದಲ್ಲಿಯೂ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ ಕರ್ತವ್ಯ ಹೌದೋ ಅಥವಾ ಅಲ್ಲವೋ ಎಂದು ಕೇಳುತ್ತೇನೆ ? ರಕ್ಷಣೆಯನ್ನು ನಾವೇ ಕೇಳಿ ಪಡೆಯಬೇಕೆ ? ಇಂತಹ ಒಂದು ಪ್ರಕ್ಷುಬ್ಧ ವಾತಾವರಣವಿರುವಾಗ ಅವರ ಮನೆ ಮುಂದೆ ಪೋಲೀಸಿನವರು ಇರುವುದು ಒಳ್ಳೆಯದಲ್ಲವೇ ? Are they so much demoralized ? Whenever there is an incident even in respect of the Members of Parliament, the Police are sent. It is so even in respect of Ministers and Speakers. Here, I think they are afraid to send the Polic for their protection. ವಿರೋಧಪಕ್ಷದ ನಾಯಕರ ಮನೆ ಮುಂದೆ ಪೋಲೀಸಿನವರನ್ನು ಕಳುಹಿಸಿಕೊಡುವುದಕ್ಕೆ ಏನಾದರು ಅಜಿಕೆ ಇದೆಯೇ ಹೇಗೆ ?

ಶ್ರೀ ಡಿ. ದೇವರಾಜ ಅರಸ್ : ಅಲ್ಲಿಗೆ ಪೋಲಿಸಿನವರನ್ನು ಹಾಕಿದ್ದೇವೆ.

Budget Estimats for 1979-80 (General Discussion Debats continued)

†ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ : (ಮಾಯಕೊಂಡ) : ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಪತ್ರವನ್ನು ಬೆಂಬಲಿಸಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛೆಪಡುತ್ತೇನೆ. ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ ಬಡ್ಜೆಟ್ ತಯಾರಿಸುವುದು ಬಹಳ ಕಷ್ಟದಾಯಕವಾದ ಕೆಲಸ, ಆದರಲ್ಲೂ, ಎಲ್ಲ ವರ್ಗದವರಿಗೂ ಒಪ್ಪಿಕೊಳ್ಳುವಂತಹ ಬಡ್ಜೆಟ್ ತಯಾರಿಸುವುದು ಇನ್ನೂ ಕಷ್ಟದ ಕೆಲಸವೆಂದು ಹೇಳಿದ್ದಾರೆ. ಆದರೂ ಮಾನ್ಯ ಅರ್ಥಸಚಿವರನ್ನು ಮತ್ತು ನಮ್ಮ ಸರ್ಕಾರವನ್ನು ನಾವು ಈ ದಿವಸ ಅಭಿನಂದಿಸಬೇಕಾಗಿದೆ. ಏಕೆಂದರೆ, ಈ ಆಯವ್ಯಯ ಪತ್ರ ಎಲ್ಲ ವರ್ಗದ ಜನರ ಮೆಚ್ಚುಗೆಯನ್ನು ಪಡೆದಿದೆ.

ಇನ್ನು ನಾನಾ ರೀತಿಯ ಕಿರುಕುಳಗಳಿಗೆ ಸಿಕ್ಕಿದಂಥ ನಮ್ಮ ವ್ಯಾಪಾರಿ ಜನರು ಅವರು ದೊಡ್ಡವರೇ ಇರಬಹುದು, ಚಿಕ್ಕವರೇ ಇರಬಹುದು, ಇವರಿಗೆಲ್ಲಾ ಅನುಕೂಲವಾಗುವಂತೆ ಆಕ್ಟ್ರಾಯನ್ನು ಸಂಪೂರ್ಣವಾಗಿ ನಮ್ಮ ಸರ್ಕಾರ ರದ್ದು ಮಾಡಿದ್ದರಿಂದ, ಈ ಜನರೂ ಸಹ ಮಾನ್ಯ ಅರ್ಥ ಸಚಿವರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ. ವ್ಯಾಪಾರಸ್ಥರು, ಬಡವರು, ಹಿಂದುಳಿದ ವರ್ಗದವರು ಮೊದಲ್ಗೊಂಡು ಎಲ್ಲರೂ ಈ ಒಂದು ಬಡ್ಜೆಟ್‌ನ್ನು ಸ್ವಾಗತಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದಾರೆ. ಇಡೀ ದೇಶದಲ್ಲಿಯೇ ಮೊದಲನೆಯದಾಗಿ ಈ ಆಕ್ಟ್ರಾಯನ್ನು ರದ್ದು ಮಾಡುವಂತಹ ಒಂದು ದಿಟ್ಟತನದ ಹೆಜ್ಜೆಯನ್ನು ಇಟ್ಟಂತಹ ನಮ್ಮ ಸರ್ಕಾರವನ್ನು ನಾನೂ ಸಹ ಅಭಿನಂದಿಸುತ್ತೇನೆ. ಆದರೆ ಇದರ ಹಿನ್ನೆಲೆಯಲ್ಲಿ ನಾನಾ ರೀತಿಯ ಸಮಸ್ಯೆಗಳು ಉದ್ಭವವಾಗುತ್ತವೆ. ಇನ್ನು ಮುಂದೆ ಈ ಆಕ್ಟ್ರಾಯ್ ರದ್ದಿನಿಂದ ನಮ್ಮ ಮುನಿಸಿಪಾಲಿಟಿಗಳು ಹಾಗೂ ಕಾರ್ಪೊರೇಷನ್‌ಗಳು ಜೆನ್‌ಷನ್‌ದಾರರ ತರಹ ಸ್ವಲ್ಪ ಹಣ ಸ್ವೀಕಾರ ಮಾಡಿ ತಮ್ಮ ಕೆಲಸಗಳನ್ನು ಸೀಮಿತಗೊಳಿಸುವಂತಹ ಅವಕಾಶ ಬರಬಹುದೆಂಬ ಶಂಕೆ ನನಗಿದೆ. ಈ ಒಂದು ವಿಷಯವನ್ನು ನಮ್ಮ ಸರ್ಕಾರ ಸರಿಯಾಗಿ ಎದುರಿಸಬೇಕು : ನಮ್ಮ ಮುನಿಸಿಪಾಲಿಟಿಗಳು ಹಾಗೂ ಕಾರ್ಪೊರೇಷನ್‌ಗಳಿಗೆ ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸಿ, ಅವರ ಅಭಿವೃದ್ಧಿ ಕಾರ್ಯಗಳಿಗೆ ಯಾವ ಅಡೆತಡೆಗಳೂ ಬರದಂತೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.